ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2438
ಸದಸ್ಯರ ಹೆಸರು	:	ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	30.03.2021.
ಉತ್ತರಿಸುವವರು	:	ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು.

ಕ್ರ ಸಂ.	ಪ್ರಶ್ನೆ	ಉತ್ತರ	Answer
ಅ)	ರಾಜ್ಯದಲ್ಲಿನ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ದೇಶದ ಕೈಗಾರಿಕೆಯ ಬೆನ್ನೆಲುಬು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ದೇಶದ ಒಟ್ಟು ಅಭಿವೃದ್ಧಿ ಉತ್ಪನ್ನಗಳ (GDP) ಪೈಕಿ ಶೇ.30 ರಷ್ಟು ಈ ವಲಯದಿಂದ ಬರುತ್ತಿರುವುದು ನಿಜವೇ;	ಹೌದು. ದೇಶದ ಒಟ್ಟು ಅಭಿವೃದ್ಧಿ ಉತ್ಪನ್ನಗಳ (GDP) ಪೈಕಿ ಶೇ.30 ಕ್ಕಿಂತ ಹೆಚ್ಚು ಎಂ.ಎಸ್.ಎಂ.ಇ. ವಲಯದಿಂದ ಬರುತ್ತದೆ.	Yes. Among the Country's total GDP 30% share is contributed by MSME sector.
ಆ)	ರಾಜ್ಯದಲ್ಲಿರುವ ಇಂತಹ ಕೈಗಾರಿಕೆಗಳನ್ನು ಕೈಗಾರಿಕಾ ಅಭಿವೃದ್ಧಿ ಪ್ರದೇಶದಲ್ಲಿ ಹೆಚ್ಚು ಹೆಚ್ಚು ಸ್ಥಾಪಿಸಿ ಈ ಪ್ರದೇಶದ ಸುತ್ತಮುತ್ತಲಿನ ಜನತೆಗೆ ಉದ್ಯೋಗ ಕಲ್ಪಿಸಲು ರಾಜ್ಯ ಸರ್ಕಾರ ರೂಪಿಸಿರುವ ಉತ್ತೇಜನ ಪೂರಕವಾದ ಸಣ್ಣ ಕೈಗಾರಿಕಾ ನೀತಿಗಳೇನು; (ಸಂಪೂರ್ಣ ವಿವರ ನೀಡುವುದು)	ರಾಜ್ಯದಲ್ಲಿರುವ ಇಂತಹ ಕೈಗಾರಿಕೆಗಳನ್ನು ಕೈಗಾರಿಕಾ ಅಭಿವೃದ್ಧಿ ಪ್ರದೇಶದಲ್ಲಿ ಹೆಚ್ಚು ಹೆಚ್ಚು ಸ್ಥಾಪಿಸಿ ಈ ಪ್ರದೇಶದ ಸುತ್ತಮುತ್ತಲಿನ ಜನತೆಗೆ ಉದ್ಯೋಗ ಕಲ್ಪಿಸಲು ರಾಜ್ಯ ಸರ್ಕಾರ ರೂಪಿಸಿರುವ ಉತ್ತೇಜನ ಪೂರಕವಾದ ಸಣ್ಣ ಕೈಗಾರಿಕೆಗಳ ನೀತಿಗಳು ಮತ್ತು ಇತರೆ ಯೋಜನೆಗಳು ಈ ಕೆಳಗಿನಂತಿವೆ. 1. ಕರ್ನಾಟಕ ರಾಜ್ಯ ಕೈಗಾರಿಕಾ ನೀತಿ 2020-25 ರಂತೆ ಕೆಳಕಾಣಿಸಿದ ಪ್ರೋತ್ಸಾಹ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಅರ್ಹ ಕೈಗಾರಿಕೆಗಳಿಗೆ ನೀಡಿ ಉತ್ತೇಜಿಸಲಾಗುತ್ತಿದೆ. 1. ಮುದ್ರಾಂಕ ಶುಲ್ಕ ವಿನಾಯಿತಿ 2. ನೋಂದಣಿ ಶುಲ್ಕ ರಿಯಾಯಿತಿ. 3. ಬಂಡವಾಳ ಹೂಡಿಕೆ ಸಹಾಯಧನ 4. ಕಿರು ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸಹಾಯಧನ 5. ಭೂ ಪರಿವರ್ತನಾ ಶುಲ್ಕ ಮರುಪಾವತಿ. 6. ರಫ್ತು ಆದಾರಿತ ಘಟಕಗಳಿಗೆ ರಿಯಾಯಿತಿ. 7. ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ. 8. ವಿದ್ಯುತ್ ತೆರಿಗೆ ವಿನಾಯಿತಿ 9. ತಾಂತ್ರಿಕ ಉನ್ನತೀಕರಣ, ಗುಣಮಟ್ಟ	Government of Karnataka has framed and implementing the following policies and schemes for the development of MSMEs in the State. 1. Under Karnataka Industrial Policy 2020-25 the following incentives and concessions are being offered for new/ expansion/ modernization and diversification of MSMEs 1. Investment promotion subsidy 2. Exemption from Stamp duty registration 3. Registration fee concession. 4. Reimbursement of NA conversion fee 5. Power subsidy to micro & small industries 6. Effluent treatment plant subsidy 7. Electricity tax exemption 8. Incentives to Export oriented units.

		ಪ್ರಮಾಣ ಪತ್ರ ಸಹಾಯಧನ 10. ಮಳೆ ನೀರುಕೊಯ್ಲು / ಸಂರಕ್ಷಣೆ ಸಹಾಯಧನ 11. ತಂತ್ರಜ್ಞಾನ ಉನ್ನತೀಕರಣಕ್ಕೆ ಬಡ್ಡಿ ಸಹಾಯಧನ 2. ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನಾ ಯೋಜನೆಯಡಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಗರಿಷ್ಠ ಸಾಲ ರೂ. 25 ಲಕ್ಷಗಳವರೆಗೆ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸಿ ಸಣ್ಣ ಉದ್ಯಮಗಳನ್ನು ಸ್ಥಾಪಿಸಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲ ಒದಗಿಸಲಾಗುವುದು ಹಾಗೂ ಯೋಜನಾ ವೆಚ್ಚದ ಮೇಲೆ ಶೇ. 15 ರಿಂದ ಶೇ.35 ರವರೆಗೆ ಗರಿಷ್ಠ ರೂ.3.75 ಲಕ್ಷದಿಂದ ರೂ.8.75 ಲಕ್ಷದವರೆಗೆ ಸಹಾಯಧನ ನೀಡಲಾಗುತ್ತಿದೆ. 3. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಸ್ಥಾಪಿಸಲು ರೂ.5.00 ಕೋಟಿಗಳವರೆಗೆ ಸಾಲ ಪಡೆದು ನಿಗದಿತ ಸಮಯದಲ್ಲಿ ಮರುಪಾವತಿ ಮಾಡಿದ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕಾ ಘಟಕಗಳಿಗೆ 5 ವರ್ಷಗಳ ಅವಧಿಗೆ ಶೇಕಡ 6 ರಂತೆ ಬಡ್ಡಿ ಸಹಾಯಧನ ನೀಡಲಾಗುವುದು. 4. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಶೇ 75 ರಿಯಾಯಿತಿ ದರದಲ್ಲಿ ಕೈಗಾರಿಕಾ ನಿವೇಶನಗಳನ್ನು (ಗರಿಷ್ಠ 2 ಎಕರೆ) ಮತ್ತು ಕೈಗಾರಿಕಾ ಶೆಡ್‌ಗಳನ್ನು ನೀಡಲಾಗುತ್ತಿದೆ. 5. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಗರಿಷ್ಠ ರೂ.10 ಲಕ್ಷ ಯೋಜನಾ ವೆಚ್ಚದ ಮೇಲೆ ಶೇ 60 ರಷ್ಟು ಗರಿಷ್ಠ ರೂ.5.00 ಲಕ್ಷ ಸಹಾಯಧನ ನೀಡಲಾಗುತ್ತಿದೆ. 6. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ	9. Technology upgradation, quality certification subsidy. 10. Rain Water harvesting / conservation subsidy 11. Interest subsidy for technology upgradation 2. **Prime Minister's Employment Generation Programme:** Under this scheme financial assistance to the projects upto Rs.25 lakh for manufacturing sector and to the projects uptoRs. 10 lakh for Service Sector is extended in the form of loan through various banks. Subsidy percentage is 15% to 35%. Max subsidy available is 3.75 lakhs to 8.75 lakhs. 3. 6% interest subsidy is given to entrepreneurs desiring to establish micro and small enterprises availing loan from Karnataka State Finance Corporation for a period of 5 years. The max loan amount is Rs.5.00 crore. 4. Under SCSP/ TSP scheme Industrial sites/Plots/sheds will be allotted at 75% subsidized rate to SC/ST entrepreneurs by the Karnataka Industrial Areas Development Board / Karnataka State Small Scale Industries Corporation. The maximum extent land to be considered for allotment at subsidized rate is 2 acres. 5. **Subsidy to micro enterprises/ artisan on loan availed from banks.** Under this scheme financial assistance will be given in the form of loan through financial institutions/ Commercial

		ಪಂಗಡದ ಮೊದಲ ಪೀಳಿಗೆಯ ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಸ್ಥಾಪಿಸುವ ಹೊಸ ಘಟಕಗಳಿಗೆ ಗರಿಷ್ಟ ರೂ.2.00 ಕೋಟಿ ಯೋಜನಾ ವೆಚ್ಚದಲ್ಲಿ The Debt Equity Ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ) ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಬಡ್ಡಿರಹಿತ ಗರಿಷ್ಟ ರೂ.33 ಲಕ್ಷ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುತ್ತಿದೆ.	banks, Co-operative banks, Regional Rural Banks (excluding Credit co-operative societies) for the projects upto Rs. 10 lakhs to SC/ST entrepreneurs for setting up Micro/small enterprises. The subsidy given under this scheme by Government is 60% limited to maximum of Rs.5.00 lakhs. 6. **Soft seed capital assistance to micro and small enterprises.** Under this scheme, financial assistance to the extent of 50% of 1/3 of promoter's contribution will be given to SC/ST first generation entrepreneurs, intending to start new enterprises by availing loan from banks. Soft seed capital of maximum Rs.33.00 lakh will be sanctioned for the projects with less than Rs.2.0 crore investments on plant and machinery and Debt Equity ratio of 2:1.
ಇ)	ಈ ಕ್ಷೇತ್ರದಲ್ಲಿ ಗ್ರಾಮಾಂತರ ಮತ್ತು ಹಳ್ಳಿಗಾಡಿನಿಂದ ಬಂದಿರುವ ಕೌಶಲ್ಯರಹಿತ ಮತ್ತು ಅರೆ-ನುರಿತ ಉದ್ಯೋಗಿಗಳಿಗೆ ತರಬೇತಿ ನೀಡಲು ಪ್ರತಿಯೊಂದು ಕೈಗಾರಿಕಾ ಅಭಿವೃದ್ಧಿ ವಲಯದಲ್ಲಿ Skill Development Institute ತೆರೆಯಲು ಯೋಜನೆ ರೂಪಿಸಿದೆಯೇ; ಇಲ್ಲದಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?	ಈ ನಿಟ್ಟಿನಲ್ಲಿ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ಈಗಾಗಲೇ ಕೆಲವು ಕೈಗಾರಿಕಾ ಸಂಸ್ಥೆ / ಸಂಘಗಳಾದ ELCIA/Flipkart-Instrakart / Mysore Industrial Association, ESDM Cluster ಮತ್ತು ಇತರೆ ಸಂಸ್ಥೆಗಳೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳುತ್ತಿದ್ದು, ಇವರುಗಳಿಂದ ಉದಯೋನ್ಮುಖ ಕೌಶಲ್ಯ ತರಬೇತಿ ನೀಡಿ ಉದ್ಯೋಗ ದೊರಕಿಸುವ ಕ್ರಮವನ್ನು ಕೈಗೊಳ್ಳಲಾಗಿದೆ. ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಈ ಕುರಿತು ಪ್ರತ್ಯೇಕ ಕೌಶಲ್ಯ ಅಭಿವೃದ್ಧಿ ಸಂಸ್ಥೆಗಳನ್ನು ತೆರೆಯಲಾಗಿರುವುದಿಲ್ಲ. ಇದಲ್ಲದೇ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಸರ್ಕಾರಿ ಹಾಗೂ ಖಾಸಗಿ ತರಬೇತಿ ಸಂಸ್ಥೆಗಳಿಗೆ ಕೌಶಲ್‌ಕಾರ್ ವೆಬ್ ಪೋರ್ಟಲ್‌ನಲ್ಲಿ ಮಾನ್ಯತೆ ನೀಡುವ ಪ್ರಕ್ರಿಯೆ ಜಾರಿಯಲ್ಲಿದ್ದು ಇದುವರೆಗೆ 282 ಖಾಸಗಿ	In this direction MoUs have been signed by KSDC with few industrial institution and association viz ELCIA/Flipkart-Instrakart / Mysore Industrial Association, ESDM Cluster etc. Action is taken to impart skill under emerging skills and placement thereof. No separate Skill Development Institution have been opened by KSDC. Further, the process of registration of govt. and private Training Partners in kaushalkar web portal by KSDC is on. So far 282 private training partners have accredited. In these VTPs 375 training centres have been accredited. Short term training is being imparted by these training centres. Furthermore there are 62 active training centres have been accredited by GoI norms in the State under PMKVY and short term training is

		ತರಬೇತಿ ಸಂಸ್ಥೆಗಳು ಮಾನ್ಯತೆ ಪಡೆದಿವೆ. ಈ ಸಂಸ್ಥೆಗಳಲ್ಲಿ 375 ತರಬೇತಿ ಕೇಂದ್ರಗಳಿಗೆ ಮಾನ್ಯತೆ ನೀಡಲಾಗಿದೆ. ಸದರಿ ತರಬೇತಿ ಸಂಸ್ಥೆಗಳ ಮೂಲಕ ವಿವಿಧ ವೃತ್ತಿಗಳಲ್ಲಿ ಅಲ್ಪಾವಧಿ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಮುಂದುವರೆದು, ರಾಜ್ಯದಲ್ಲಿ 62 ಸಕ್ರಿಯ ಪಿಎಂಕೆಕೆವೈ ತರಬೇತಿ ಕೇಂದ್ರಗಳಿಗೆ ಕೇಂದ್ರ ಸರ್ಕಾರದ ಮಾನದಂಡಗಳನ್ವಯ ಮಾನ್ಯತೆ ನೀಡಲಾಗಿದ್ದು ಇವುಗಳಲ್ಲಿಯು ಸಹ ಅಲ್ಪಾವಧಿ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತಿದೆ. **ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ)** 24 ಜಿಟಿಟಿಸಿಗಳಲ್ಲಿ ಅಲ್ಪಾವಧಿ ಹಾಗೂ ದೀರ್ಘಾವಧಿ ಕೌಶಲ್ಯ ತರಬೇತಿಗಳನ್ನು ನೀಡಲಾಗುತ್ತಿದೆ. ಈ ಜಿಟಿಟಿಸಿ ಕೇಂದ್ರಗಳ ಪೈಕಿ ಸೀಮೆನ್ಸ್ ಹಾಗೂ ಡಿಸೈನ್ ಟೆಕ್ ಸಂಸ್ಥೆಗಳ ಸಹಹೋಗದೊಂದಿಗೆ 4, ಮೆ॥ ಡಾಸಲ್ಟ್ ಸಹಯೋಗದೊಂದಿಗೆ 4 ಹಾಗೂ ಮೆ॥ ಪಿಟಿಸಿ ಸಹಯೋಗದೊಂದಿಗೆ 7 ಒಟ್ಟು 15 ಶ್ರೇಷ್ಠತಾ ಕೇಂದ್ರಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದೊಂದಿಗೆ ಒಡಂಬಡಿಕೆ ಮಾಡಿಕೊಂಡು ಪ್ರಾರಂಭಿಸಲಾಗಿದೆ. ಇವುಗಳಲ್ಲಿ ಕೈಗಾರಿಕೆಗಳ ಅಗತ್ಯ ವೃತ್ತಿಗಳ ಬೇಡಿಕೆಗಳಿಗನುಸಾರ ಮಾನವ ಸಂಪನ್ಮೂಲ ಒದಗಿಸಲು ಕೌಶಲ್ಯ ತರಬೇತಿಯನ್ನು ನೀಡಿ ಉದ್ಯೋಗ ನಿಯುಕ್ತಿಗೊಳಿಸಲಾಗುತ್ತಿದೆ. **ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆ (ಕೆಜಿಟಿಟಿಐ)** ರಾಜ್ಯದಲ್ಲಿನ 5 ಕೆಜಿಟಿಟಿಐ ಕೇಂದ್ರಗಳಲ್ಲಿ ಕೈಗಾರಿಕೆಗಳ ಅಗತ್ಯ ವೃತ್ತಿಗಳ ಬೇಡಿಕೆಗಳಿಗನುಸಾರ ಅಲ್ಪಾವಧಿ ಮತ್ತು ದೀರ್ಘಾವಧಿ ಕೌಶಲ್ಯ ತರಬೇತಿ ನೀಡಲಾಗುತ್ತಿದೆ. **ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್.ಆರ್.ಎಲ್.ಎಂ.)** ಕೇಂದ್ರ ಪುರಸ್ಕೃತ ಯೋಜನೆಯಾದ ಡಿಡಿಯು-ಜಿಕೆವೈ ರಡಿ ರಾಜ್ಯದಲ್ಲಿ 62 ಸಕ್ರಿಯ ಯೋಜನಾ ಅನುಷ್ಠಾನ ಏಜೆನ್ಸಿಗಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯನುಸಾರ ಮಾನ್ಯತೆ ನೀಡಿದ್ದು ಇವುಗಳಲ್ಲಿ ಗ್ರಾಮೀಣ ಯುವ ಜನತೆಗೆ ಕೌಶಲ್ಯ ತರಬೇತಿಯನ್ನು ನೀಡಲಾಗುತ್ತಿದೆ. ರಾಜ್ಯದಲ್ಲಿನ 33 ಆರ್‌ಸೆಟಿ/ರೂಡ್‌ಸೆಟಿ ಗಳಲ್ಲಿಯು ಸಹ ಕೌಶಲ್ಯ ತರಬೇತಿಯನ್ನು ನೀಡಲಾಗುತ್ತಿದ್ದು ತರಬೇತಿ ಪೂರ್ಣಗೊಂಡ ನಂತರ ಸ್ವಯಂ ಉದ್ಯೋಗ ಹೊಂದಲು ಬ್ಯಾಂಕ್ ಸಾಲ	being imparted by these centres. **Government ToolRoom and Training Center (GTTC)** Short term and long term training are imparted in all the 24 GTTCs. In these GTTCs of the State 4 Centres of Excellence have been started under Public Private Partnership of SIEMENS and Design Tech, 4 with DASSULT and 7 with PTC and Design Tech. In all there are 15 CoEs sanctioned and MoUs have been signed. In these CoEs courses as per Industry demand are thought for supplying the human resources of industries. **Karnataka German Technical Training Institute (KGTTI)** There are 5 KGTTI centres in the State and Short term and long term training is imparted as per Industry demand for supply of human resources to the industries. **National Rural Livelihood Mission (NRLM)** Under the centrally sponsored scheme of DDUGKY short term vocational training is imparted for rural youth through 62 active Programme Implementing Agencies (PIAs) which have been accredited as per GoI guidelines. There are 33 RSETI/RUDSETIs in the State for imparting skill training. After completion of the training placement is done or candidates are helped to get bank loan for self employment. **National Urban Livelihood Mission (NULM)** Under the Employment through Skill Training and Placement (ESTP) component of NULM which is centrally sponsored scheme. There are 35 Programme Implementing Agencies (PIAs) for imparting skill training to the urban youth.

		ಪಡೆಯಲು ಸಹಾಯ ನೀಡಲಾಗುತ್ತಿದೆ. ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (ಎನ್.ಯು.ಎಲ್.ಎಂ.) ಕೇಂದ್ರ ಪುರಸ್ಕೃತ ಯೋಜನೆಯಾದ ಎನ್.ಯು.ಎಲ್.ಎಂ.ರಡಿ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ ಉಪ ಘಟಕದಡಿ ಒಟ್ಟು 35 ಖಾಸಗಿ ಯೋಜನಾ ಅನುಷ್ಠಾನ ಏಜೆನ್ಸಿಗಳಿಗೆ ಮಾನ್ಯತೆ ನೀಡಿದ್ದು ಇವುಗಳಿಂದ ನಗರ ಪ್ರದೇಶದ ಯುವ ಜನತೆಗೆ ಕೌಶಲ್ಯ ತರಬೇತಿಯನ್ನು ನೀಡಲಾಗುತ್ತಿದೆ.	

ಸಿಐ 57 ಸಿಎಸ್‌ಸಿ 2021

(ಸಿ.ಸಿ. ಪಾಟೀಲ್)
ಸಣ್ಣ ಕೈಗಾರಿಕೆ ಹಾಗೂ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು.